## ದಿವ್ಯ ಮೌನಧಾರಿ ಪಡು ಅಲೆವೂರು ವೆಂಕಟ್ರಾಯರು, ದೈವಾಧೀನ

ಸುದೀರ್ಘಕಾಲ ದೇವಿ ದುರ್ಗಾ ಪರಮೇಶ್ವರಿಯ ಸೇವೆಗಾಗಿ ತನ್ನನ್ನು ಅರ್ಪಿಸಿಕೊಂಡಿದ್ದ ಪಡು ಅಲೆವೂರು ವೆಂಟ್ರಾಯರು ತಮ್ಮ 93ನೇ ವಯಸ್ಸಿನಲ್ಲಿ ತಮ್ಮ ತುಂಬು ಸಂಸಾರದ ಸದಸ್ಯರನ್ನು ದುಃಖ ಸಾಗರದಲ್ಲಿ ಬಿಟ್ಟು ಪರಮಾತ್ಮನ ಪಾದ ಸೇರಿದರು.

ಕಲಾವಿದರೂ, ಕಲಾ ಪೋಷಕರೂ ಆಗಿದ್ದ ಅವರು ಆಧುನಿಕತೆಯ ಗೆಜ್ಜೆಧ್ವನಿ ನಮ್ಮ ಜಾನಪದ ಲೋಕದಲ್ಲಿ ತಾಂಡವವಾಡ ತೊಡಗಿದಾಗ ತಮ್ಮ ಮನೆಯಲ್ಲಿಯೇ ಯಕ್ಷಗಾನ, ತಾಳಮದ್ದಳೆ ಕೂಟಗಳನ್ನು ನಿರಂತರವಾಗಿ ಆಯೋಜಿಸುತ್ತಾ ಊರ ಜನರ ಮನೆ-ಮನಗಳಲ್ಲಿ ಸನಾತನ ಸಂಸ್ಕೃತಿಯ ಸೆಲೆ ಚಿಗುರೊಡೆದು ಬೆಳೆಯಲು ಕಾರಣರಾಗಿದ್ದರು. ಅವರಿಟ್ಟ ಹೆಜ್ಜೆಗಳಲ್ಲಿ ತನ್ನ ಹೆಜ್ಜೆಯನ್ನು ಸೇರಿಸಿ ನಡೆದ ಅವರ ಪುತ್ರಿ ಶ್ರೀಮತಿ ಗಿರಿಜಾರವರು ಅವರಂತೆ ಯಕ್ಷಗಾನ ತಾಳಮದ್ದಳೆಯ ಮಹಾಅಭಿಮಾನಿ. ಆಯ್ದ ಕಲಾವಿದರ ಕೂಡುವಿಕೆಯ ಯಕ್ಷಗಾನ, ತಾಳಮದ್ದಳೆ ಕೂಟಗಳಿದ್ದರೆ, ಮಗನ ದ್ವಿಚಕ್ರ ವಾಹನವನ್ನೇರಿ 70-80 ಹರೆಯದಲ್ಲೂ ಗಾವುದ ದೂರ ಹಾರುತ್ತಿದ್ದ ಅವರ ಉತ್ಸಾಹ ಇಂದಿನ ತರುಣ ತರುಣಿಯರ ಪಾಲಿಗೆ ಒಂದು ಆದರ್ಶ ಮತ್ತು ಸವಾಲಾಗಿತ್ತು.

ಸುಮಾರು ಎಂಬತ್ತು ವರ್ಷಗಳ ಕಾಲ ಪಡು ಅಲೆವೂರು ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ದೇವತಾಕಾರ್ಯ ನಡೆಸಿಕೊಂಡು ಬರುತ್ತಿದ್ದ ವೆಂಕಟ್ರಾಯರಿಗೆ ದೇವಪೂಜಾ ವಿಧಿ ವಿಧಾನಗಳ ಪೂರ್ಣ ಅರಿವಿದ್ದು ಅನೇಕ ಮಂದಿ ಎಳೆಯ ಪುರೋಹಿತರಿಗೂ ಅವರು ಮಾರ್ಗದರ್ಶನ ಮಾಡುತ್ತಿದ್ದರು. ದೇವಸ್ಥಾನದ ಪಾತ್ರಿಯಾಗಿ ಆ ಸ್ಥಾನಕ್ಕೆ ಗೌರವ ತುಂಬಿದ್ದರು.

ಹಿರಿಯರು, ಕಿರಿಯರು, ಬಂಧುಗಳು ಪರಕೀಯರು ಎನ್ನವ ಬೇಧವಿಲ್ಲದೆ ಎಲ್ಲರನ್ನೂ ಪ್ರೋತ್ಸಾಹದಿಂದ ಕಾಣುತ್ತಿದ್ದ ವೆಂಟ್ರಾಯರು ಯಜಮಾನಿಕೆಯ ದರ್ಪಕ್ಕೆ ಒಂದು ಅಪವಾದ ಎನ್ನುವಂತಿದ್ದರು. ಯಜಮಾನಿಕೆಗೆ ಸಹಜವಾದ ಬಿಂಕ ಬಿರುಸುಗಳಿಲ್ಲದವರು. ''ಎಂದೂ ಯಾರನ್ನೂ ಒಮ್ಮೆಯಾದರೂ ಬೈದವರಲ್ಲ ಅವರು'' ಎಂದು ಅವರ ಬಗ್ಗೆ ಅವರ ಪತ್ನಿ ಹೇಳುವಾಗ ಎಂತಹ ಅಸಾಮಾನ್ಯ ಸಹನಾಶಕ್ತಿ ಅವರದು ಎಂಬುದು ಅರ್ಥವಾಗುತ್ತದೆ.

ಪ್ರಗತಿಪರ, ಕೃಷಿಕರಾಗಿದ್ದ ವೆಂಟ್ರಾಯರು ಒಂದಿಷ್ಟೂ ಕೃಷಿಭೂಮಿಯನ್ನೂ ವ್ಯರ್ಥವಾಗಿ ಖಾಲಿಬಿಡದೆ ಕೃಷಿ ಮಾಡುತಿದ್ದರು. ಹತ್ತು ಮಕ್ಕಳ ತಮ್ಮ ತುಂಬು ಸಂಸಾರವನ್ನು ಸಾಕುವ ಜತೆಗೆ ಕೊಡುಗೈದಾನಿಯಾಗಿ, ಸರಳ ಸಜ್ಜನರಾಗಿ ಪರಿಸರದ ಜನರಿಗೆ ಪ್ರಿಯರಾಗಿದ್ದರು. ಅದೇ ಮನೋಭಾವದ ಅವರ ಪತ್ನಿ ಗಿರಿಜಾರವರು ಅನ್ನಪೂರ್ಣೆಯಾಗಿ ಬಂಧುಗಳ ಆತಿಥ್ಯ ಮಾಡುತ್ತಿದ್ದರು. ಇಂದಿಗೂ ಅತಿಥಿ ಸತ್ಕಾರ ಅವರಿಗೆ ಅತ್ಯಂತ ಪ್ರೀತಿಯ ಕೆಲಸವಾಗಿದೆ.

ಪಡು ಅಲೆವೂರು ದುರ್ಗಾ ಪರಮೇಶ್ವರಿ ದೇಗುಲದ ಸೇವಾ ನಿರತ ಕೃಷ್ಣಾನಂದ ರಾವ್, ಭಾರತೀಯ ರೈಲ್ವೇ ಹೈದರಾಬಾದ್ ವಿಭಾಗದಲ್ಲಿ ಉದ್ಯೋಗಿಯಾಗಿರುವ ರಾಮಚಂದ್ರ ರಾವ್, ಉಡುಪಿಯ ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಅಂಕಿ-ಅಂಶಗಳ ಅಧಿಕಾರಿಯಾಗಿರುವ ನಾಗರಾಜ ರಾವ್, ಸಿಂಡಿಕೇಟ್ ಬ್ಯಾಂಕ್ ಮೈಸೂರಿನಲ್ಲಿ ಅಧಿಕಾರಿಯಾಗಿರುವ ಪುಟ್ಟಣ್ಣ ರಾವ್, ಉಡುಪಿ ಜಿಲ್ಲಾ ಪಂಚಾಯತ್ ಯೋಜನಾಧಿಕಾರಿಯಾಗಿರುವ ಶ್ರೀನಿವಾಸರಾವ್, ಕೊಲ್ಕತ್ತದಲ್ಲಿ ಸ್ಟೀಲ್ ಆಥಾರಿಟಿ ಆಫ್ ಇಂಡಿಯಾದ ದುರ್ಗಾಪುರ ಕಬ್ಬಿಣ ಉಕ್ಕಿನ ಕಾರ್ಖಾನೆಯಲ್ಲಿ ಇಂಜಿನಿಯರ್ ಆಗಿರುವ ವಿಠಲ್ ರಾವ್ ಹಾಗೂ ನಾಲ್ವರು ಹೆಣ್ಣು ಮಕ್ಕಳ ಸಹಿತ ಹತ್ತು ಮಕ್ಕಳನ್ನು ಅಗಲಿರುವ ರಾಯರ ಸೊಸೆಯಂದಿರು, ಮೊಮ್ಮಕ್ಕಳ ಬಗ್ಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಆಗುತ್ತದೆ.

ಅನಾರೋಗ್ಯದಿಂದ ತನ್ನ ದೈನಂದಿನ ಆಚರಣೆಗಳಿಗೆ ಬೇರೆಯವರನ್ನು ಅವರು ಅವಲಂಬಿಸಿದ್ದು ಕೊನೆಯ ನಾಲ್ಕು ದಿನಗಳು ಮಾತ್ರ, ಅವರೊಬ್ಬ ಶತಾಯುಷಿಯಾದಾರು ಎಂದು ಆಶಿಸಿದ್ದ ಮಕ್ಕಳಿಗೆ ಬಂಧುಗಳಿಗೆ ಹಾಗೂ ಅಭಿಮಾನಿಗಳಿಗೆ ಈ ಸಜ್ಜನ, ಸಹೃದಯಿಯ ದಿಢೀರ್ ಅಗಲಿಕೆ ಅತೀವ ನೋವನ್ನುಂಟು ಮಾಡಿತು. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ ಎಂದು ನಾವೆಲ್ಲರೂ ಪ್ರಾರ್ಥಿಸುತ್ತೇವೆ.

## ಕ್ರೌಂಚವಧೆ (ಪೌರಾಣಿಕ ಕಥೆ)

(...2ನೇ ಪುಟದಿಂದ)

ಮಹರ್ಷಿಗಳು ಈ ಮಿಲನದ ದೃಶ್ಯವನ್ನು ಕಾಣುತ್ತಿರುವಂತೆಯೇ ಒಂದು ಭೀಕರ ದುರ್ಘಟನೆ ಸಂಭವಿಸಿತು. ಎಲ್ಲಿಂದಲೋ ರೊಯ್ಯನೆ ತೂರಿ ಬಂದ ಬಾಣವೊಂದು ಗಂಡು ಕ್ರೌಂಚದ ಶರೀರವನ್ನು ಭೇದಿಸಿ ರಕ್ತದ ಕೋಡಿಯನ್ನು ಹರಿಸಿತು. ಪಕ್ಷಿಯ ''ಕ್ರೀನ್, ಕ್ರೀನ್, ಕ್ರೀನ್'' ಎಂಬ ಮರಣಾಂತಿಕವಾದ ಆಕ್ರಂದನ ವನವನ್ನೆಲ್ಲಾ ಆವರಿಸಿ ಮಾರ್ದನಿಗೊಂಡಿತು. ಕೆಡೆದ ಪಕ್ಷಿಯು ವೇದನೆ ಭರಿಸಿಕೊಳ್ಳಲಾರದೆ ಕಾಲುಗಳನ್ನು ಒಗೆದೊಗೆದು ಗೋಣನ್ನು ಪಕ್ಕಕ್ಕೆ ಚೆಲ್ಲಿ ಮರಣಾಪನ್ನವಾಯಿತು. ಹೆಣ್ಣು ಪಕ್ಷಿಯು ಮರದ ಬುಡಕ್ಕೆ ಹಾರಿತು; ಮರಳಿ ಪ್ರಿಯತಮನಿದ್ದಲ್ಲಿಗೇ ಬಂದು ರೆಕ್ಕೆಗಳನ್ನು ಪಟ ಪಟನೆ ಬಡಿದು ಗಾಳಿ ಬೀಸಿ ಶೈತ್ಯೋಪಚಾರವೆಸಗಿತು.

ಆಕಸ್ಮಿಕವಾಗಿ ಘಟಿಸಿದ ದುರ್ಘಟನೆಯಿಂದ ಘಾಸಿಯಾಗಿ ಮತಿವಿಕಲ್ಪಗೊಂಡು ''ಪ್ರಿಯಕರನೇ, ಇನ್ನೂ ಏಕೆ ಮಲಗಿರುವೆ? ಏಳು ಎದ್ದೇಳು; ಈಗ ತಾನೇ ನಮ್ಮ ಸಮಾಗಮವಾಗಿದೆ. ಗೂಡೊಂದನ್ನು ನಾವು ರಚಿಸಬೇಡವೇ? ಅಂಡಗಳನ್ನು ರಕ್ಷಿಸಿ ಹೊರಬರುವ ನಮ್ಮ ಪುಟಾಣಿಗಳನ್ನು ಲಾಲಿಸಿ ಪಾಲಿಸಬೇಕಲ್ಲವೇ?'' ಎಂದು ತನ್ನ ಪಕ್ಷಿಭಾಷೆಯಲ್ಲಿ ಬಹು ವಿಧದಲ್ಲಿ ಪ್ರಲಾಪಿಸಿತು. ಪ್ರತಿಕ್ರಿಯೆ ಬರದಿರಲು ದೆಸೆದೆಸೆಗಳೂ ಕರಗುವಂತೆ ಚೀತ್ಕರಿಸಿ ಬೋರಿಡುತ್ತಾ ಶುಷ್ಕ ಪರ್ಣರಾಶಿಗಳ ಮೇಲೆ ತಕತಕನೆ ಕುಣಿದು ಕುಪ್ಪಳಿಸಿ ಶೋಕದಿಂದ ಹೊರಳಾಡಿತು. ಈ ಹೃದಯವಿದ್ರಾವಕ ದೃಶ್ಯವನ್ನು ಕಂಡು ವಾಲ್ಮೀಕಿಮುನಿಯ ಕಣ್ಣುಗಳಿಂದ ದಳ ದಳನೆ ಅಶ್ರುಧಾರೆಗಳುರುಳಿದವು.

ಅಷ್ಟರಲ್ಲಿ ಪೊದೆಗಳ ಮರೆಯಿಂದ ಬಿಲ್ಲುಬಾಣಗಳನ್ನು ಧರಿಸಿದ ಬೇಡನೊಬ್ಬನು ತಾನು ಘನ ಕಾರ್ಯವೊಂದನ್ನು ಸಾಧಿಸಿದೆನೆಂಬ ಹಮ್ಮಿನಿಂದ ಮುಗುಳ್ನಗುತ್ತಾ ಈಚೆಗೆ ನಡೆದು ಬಂದನು. ಅವನು ಎದೆಗೆ ಬಾಣವನ್ನೇರಿಸಿ ಇನ್ನೇನು ಉಳಿದ ಹೆಣ್ಣು ಕ್ರೌಂಚವನ್ನೂ ಕೊಲ್ಲುವ ಸನ್ನಾಹದಲ್ಲಿದ್ದನು. ಭಾವ-ಪರವಶತೆಗೆ ಒಳಗಾದ ಮಹರ್ಷಿಗಳು ''ತಡೆ, ತಡೆ'' ಎಂದು ಕೈಯಿಂದಲೇ ಸಂಜ್ಞೆ ಮಾಡಿ ಅಸ್ಖಲಿತ ವಾಣಿಯಿಂದ ಬೇಡನಿಗೆ ಈ ರೀತಿಯಲ್ಲಿ ಶ್ಲೋಕ ರೂಪದ ಶಾಪವೊಂದನ್ನು ನೀಡಿದರು:

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್ ॥

ತಾತ್ಪರ್ಯ : 'ಎಲೇ ಬೇಡನೇ ಪ್ರೀತಿಯಿಂದ ಇರುವ ಎರಡು ಕ್ರೌಂಚ ಪಕ್ಷಿಗಳಲ್ಲಿ ಒಂದನ್ನು ಕೊಂದಿದ್ದೀಯಾ. ಇದರಿಂದಾಗಿ ನೀನು ಅನೇಕ ಕಾಲದವರೆಗೆ ಒಳ್ಳೆಯದನ್ನು ಕಾಣುವುದಿಲ್ಲ. (ನೀನು ಕೂಡಲೇ ಸಾವನ್ನಪ್ಪು ಎಂಬ ಅರ್ಥವೂ ಇದೆ)

ಹೀಗೆ ವಿಶ್ವದ ಮೊಟ್ಟ ಮೊದಲ ಶ್ಲೋಕವು ಛಂದೋಬದ್ಧವಾಗಿ ವಾಲ್ಮೀಕಿ ಮಹರ್ಷಿಗಳ ಶ್ರೀ ಮುಖದಿಂದ ಹೊರಹೊಮ್ಮಿತು. ಅನಂತರ ಋಷಿಗಳು ನದೀತೀರದಲ್ಲಿ ಆಹ್ನಿಕಗಳನ್ನು ತೀರಿಸಿ ಶಿಷ್ಯನೊಡನೆ ಆಶ್ರಮಕ್ಕೆ ಮರಳಿದರು. ಆಶ್ರಮಕ್ಕೆ ಹಿಂದಿರುಗಿದ ಮೇಲೆ ಎಷ್ಟು ಪ್ರಯತ್ನಿಸಿದರೂ ಮಹರ್ಷಿಗಳಿಗೆ ವೇದಪಾರಾಯಣ, ಧ್ಯಾನಾದಿಗಳಲ್ಲಿ ಮನಸನ್ನು ತೊಡಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಾರದರು ಬೋಧಿಸಿದ ರಾಮಾಯಣದ ಕಥೆ, ತದನಂತರದ ಕ್ರೌಂಚವಧೆಯ ಪ್ರಸಂಗಗಳು ಪುಂಖಾನು ಪುಂಖವಾಗಿ ಚಿತ್ತದ ಭಿತ್ತಿಯಲ್ಲಿ ಮೂಡಿ ಬರುತ್ತಿದ್ದವು. ಎಂದೂ ರಾಗದ್ವೇಷಗಳಿಗೆ ಒಳಗಾಗದ ತಾವು ಬೇಟೆಯೇ ಜೀವನಾಧಾರವಾಗಿರುವ ಬೇಡನೊಬ್ಬನನ್ನು ಶಪಿಸಿದ್ದು ಸರಿಯೇ? ಅಥವಾ ಶ್ರೀ ರಾಮನ ಕಥೆಗೂ ಈ ಕ್ರೌಂಚ ವಧೆಯ ಪ್ರಸಂಗಕ್ಕೂ ಏನಾದರೂ ಕಾರ್ಯಕಾರಣ ಸಂಬಂಧವಿರಬಹುದೇ? ಎಂದು ಚಿಂತಿತರಾದರು.

ಆ ವೇಳೆಗೆ ಪರಮಪಿತ ಚತುರ್ಮುಖ ಬ್ರಹ್ಮದೇವರು ಮಹರ್ಷಿಗಳಿಗೆ ಪ್ರತ್ಯಕ್ಷರಾಗಿ ''ವಾಲ್ಮೀಕಿ ಋಷಿವರ್ಯರೇ, ನಿಮ್ಮ ಮನಸ್ಸಿನ ಆಂದೋಲನವನ್ನು ನಾನು ಗುರುತಿಸಿರುವೆನು. ಈ ಮಧ್ಯಾಹ್ನ ನೀವು ಶೋಕಿತರಾಗಿ ಶ್ಲೋಕ ರೂಪದಲ್ಲಿ ಬೇಡನಿಗೆ ಕೊಟ್ಟ ಶಾಪ ಛಂದೋಬದ್ಧವಾಗಿ ಮೂಡಿಬರುವಂತೆ ಅನುಗ್ರಹಿಸಿದವನು ನಾನೇ. ಈ ಶ್ಲೋಕವೇ ಶ್ರೀ ರಾಮನ ಪುಣ್ಯ ಕಥೆಗೆ ನಾಂದಿಯಾಗಲಿ. ಶ್ರೀ ರಾಮಾಯಣ ಮಹಾಕಾವ್ಯವನ್ನು ಮನೋಹರವಾಗಿ ಶ್ಲೋಕರೂಪದಲ್ಲಿ ವಿಶದವಾಗಿ ಬರೆಯಿರಿ. ನಿಮಗೆ ಸತ್ಯ ದರ್ಶನದೊಂದಿಗೆ ಭಾವ ಸ್ಫುರಣೆಯಾಗುವಂತೆ ಅನುಗ್ರಹಿಸುವೆನು. ಶ್ರೀ ರಾಮ ಚರಿತ್ರೆಯ ಮಹಾಕಾವ್ಯವು ಪುಣ್ಯ ಕಾವ್ಯವೂ ಆಗಿ ಆಚಂದ್ರಾರ್ಕವೂ ಜನರು ಭಕ್ತಿಯಿಂದ ಪಠಿಸುವಂತಾಗಲಿ. ಶ್ರೀ ರಾಮಾಯಣ ಮಹಾಕಾವ್ಯವನ್ನು ಬರೆದು ನೀವು ಆದಿಕವಿ ಎನ್ನಿಸಿಕೊಳ್ಳುವಿರಿ. ನಿಮಗೆ ಶುಭವಾಗಲಿ ಎಂದು ಹರಸಿ ಅಂತರ್ಧಾನರಾದರು.

ನಾರದರು ನುಡಿದ ಕಥೆಯನ್ನು ಮಹರ್ಷಿಗಳು ಕ್ರಮಬದ್ಧವಾಗಿ ನವರಸಗಳೂ ಪಡಿಮೂಡುವಂತೆ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಲ್ಲಿ ಪರಿಪೂರ್ಣತೆಯಿಂದ ವಿಸ್ತರಿಸಿ ಬರೆದರು. ಆದಿಕವಿಯಿಂದ ಪ್ರಾದುರ್ಭವವಾದ ಈ ರಾಮಾಯಣ ಮಹಾಕಾವ್ಯವು ಮುಂದೆ ಸಾವಿರಾರು ಕವಿಗಳಿಗೆ ಸ್ಫೂರ್ತಿಯನ್ನು ನೀಡಿ ಇಂದಿಗೂ ಜನಮಾನಸದಲ್ಲಿ ನೆಲೆನಿಂತು ಪ್ರಭಾವ ಬೀರುತ್ತಿದೆ. ಭಾರತೀಯರಿಗೆ ಪರಮ ಪವಿತ್ರ ಪುಣ್ಯ ಗ್ರಂಥವಾಗಿದೆ.

## ಅನುಭವ.....

(...2ನೇ ಪುಟದಿಂದ)

ತನ್ನಷ್ಟಕ್ಕೆ ನಡೆಯುವ ಅಸೋಸಿಯೇಷನ್ ಎಂದು ತಿಳಿಯುತಾರೆ ಇದು ಹೇಗೆ ಕ್ಷಣ ಮಾತ್ರದಲ್ಲಿ ಆಗಿಬಿಡುತ್ತದೆ ಎನ್ನುವ ಖಂಡಿತ ತಿಳುವಳಿಕೆ ಯಾರಿಗೂ ಇಲ್ಲವಾದರೂ ಅದೋಂದು ಕೇವಲ ಅಸೋಸಿಯೇಷನ್ ಎಂದು ಉತ್ತರಿಸಬಹುದು. ಇದನ್ನು 'ಕಾರಣ ಕಾರ್ಯ ಸಂಘಾತ' ಎಂದೂ ಕರೆಯಬಹುದು. ಆ ಅಸೋಸಿಯೇಷನನ್ನೇ ಆತ್ಮ ಎಂದು ಕರೆದಿದ್ದಾರೆ ಎನ್ನುವುದು ಒಂದು ವಾದ.

ನನ್ನ ಅನುಭವದಂತೆ ಅಸೋಸಿಯೇಷನ್ ಎಂದರೆ ಆತ್ಮ ಅಲ್ಲ. ಈ ಅಸೋಸಿಯೇಷನಿನ ಪ್ರತಿಯೊಂದು ಘಟ್ಟದಲ್ಲಿಯೂ ನಮ್ಮೊಳಗೆ ಒಂದು ಅರಿವು ಉಂಟಾಗುತ್ತದೆ. ಉದಾಹರಣೆಗಾಗಿ ನಾನು ಕಣ್ಣಿನಲ್ಲಿ ನೋಡಿದ ಅರಿವು, ಕೇಳಿದ ಸ್ವರದ ಅರಿವು, ಮೂಸಿದ ವಾಸನೆಯ ಅರಿವು, ಮುಟ್ಟಿದ ವಸ್ತುವಿನ ಅರಿವು, ತಿಂದ ಆಹಾರದ ಅರಿವು, ನಾವು ಯೋಚಿಸಿದ ಯೋಚನೆಯ ಅರಿವು, ಆ ಅರಿವಿನಿಂದ ಉಂಟಾಗುವ ಬುದಿಯ ಅರಿವು, ಆ ತೀರ್ಮಾನದಲ್ಲಿ ಇರುವ ನಮ್ಮ ಅಹಂಕಾರದ ಅರಿವು ಹೀಗೆ ಎಲ್ಲಾ ಹಂತದ ಅರಿವೂ ನಮಗೆ ಆಗುತ್ತದೆ. ಈ ಅರಿವಿನ ನಂತರವೂ ನಾವೂ ನಮ್ಮ ಯೋಚನೆ, ಬುದಿ ಅಹಂಕಾರಗಳ ಆಗಿನ ಸ್ಥಿತಿಯನ್ನು ಬದಲಾಯಿಸಿ ಮತ್ತೆ ನಮ್ಮನ್ನು ನಾವು ಅರಿತು ಕೊಳ್ಳಲು ಕೂಡಾ ಶಕರು. ಆ ಅರಿವೇ ನಮ್ಮ ಅಂತಿಮ ಸ್ವರೂಪ. ಆ ಅರಿವಿನೆಲ್ಲಿಯೇ ನಮ್ಮೊಳಗಿನ ನಮ್ಮ ಸ್ವರೂಪದ ಅರಿವಾಗಲು ಸಾಧ್ಯ. ಅಂದರೆ ಅರಿವೇ ನಾವು. ನಮಗೆ ಬೇರೆ ರೂಪವಿಲ್ಲ, ಗುಣವಿಲ್ಲ. ಕರ್ಮಗಳೆಂಬುವುದು ಇಲ್ಲ.

ಇನ್ನೊಂದು ಉದಾಹರಣೆಯಿಂದ ಇದನ್ನು ವಿವರಿಸಲು ಪ್ರಯತ್ನಿಸುತ್ತೇನೆ. ನಾವು ನಿಮಿಷಕ್ಕೆ ಹದಿನೆಂಟು ಸಲ ಅನವರತ ಉಸಿರಾಟ ಮಾಡುತ್ತಿರುತ್ತೇವೆ. ಇದೊಂದು ತೋರಿಕೆಗೆ ಕಾರ್ಯ ಕಾರಣ ಸಂಘಾತದಂತೆ ನಮಗೆ ಅರಿವಾಗುತ್ತದೆ. ಆಕ್ಸಿಜನ್ ಬೇಕೆಂಬ ಕಾರಣ, ಆಕ್ಸಿಜನನ್ನು ಒಳಗೆ ತೆಗೆದುಕೊಂಡದ್ದೇ ಕಾರಣವಾಗಿ ನಮಗೆ ಬೇಡವಾದ ಅಂಗಾರಾಮ್ಲವನ್ನು ಹೊರಗೆ ಬಿಡುವ ಕಾರ್ಯ ಅಥವಾ ಅಂಗಾರಾಮ್ಲ ದೇಹಕ್ಕೆ ಬೇಡವೆಂದು ಹೊರ ಬಿಡುವ ಕಾರ್ಯ ನಡೆಯುತ್ತಿರುತ್ತದೆ. ಈ ಕಾರಣವು ಯಾವಾಗಲೂ ಇದ್ದೇ ಇರುವುದರಿಂದ ಈ ಕಾರ್ಯವೂ ನಡೆಯಲೇ ಬೇಕಾದ ಪ್ರಕ್ರಿಯೆಯಾಗುತ್ತದೆ. ಈ ಕಾರ್ಯ ಕಾರಣದ ಪ್ರಕ್ರಿಯೆಗೆ ಅಡೆತಡೆಯೇ ಇಲ್ಲ. ಅಂದರೆ ನಮಗೆ ಜೀವಂತವಾಗಿರುವುದಕ್ಕೆ ಆಕ್ಸಿಜನ್ ಸದಾಕಾಲವೂ ಬೇಕಾಗಿಯೇ ಇರುವುದರಿಂದ ಮತ್ತು ಈ ಕಾರಣವು ನಿಲ್ಲಲು ಸಾಧ್ಯವಿಲ್ಲವಾದುದುರಿಂದ ಉಸಿರನ್ನು ಹೊರಗೆ ಬಿಡುವ ಕಾರ್ಯವೂ ನಿಲ್ಲದೆ ನಡೆಯಲೇಬೇಕಾಗುತದೆ. ಇದು ಒಂದು ಅನವರತ ತನ್ನಷ್ಟಕ್ಕೆ ತಾನೇ ನಡೆಯುವ ಅಸೋಸಿಯೇಷನ್ ಮಾತ್ರವಾಗಿದ್ದರೆ ನಮ್ಮ ಉಸಿರಾಟ ಎಂದೂ ನಿಲ್ಲಲು ಸಾಧ್ಯವೇ ಇಲ್ಲ, ನಿಲ್ಲಬಾರದು.

ಆದರೆ ನಮ್ಮ ಸಾವು ಉಂಟಾದಾಗ ಉಸಿರಾಟ ನಿಲ್ಲುತ್ತದೆ. ಆದುದರಿಂದ ನಾವು ಬದುಕಿರುವುದರಿಂದಲೇ ಉಸಿರಾಟ ಮಾಡುತ್ತೇವೆಯೇ ವಿನಹ ಉಸಿರಾಟವು ಸತ್ತವನಿಂದ ಸಾಧ್ಯವಾಗುವುದೇ ಇಲ್ಲ. ಅಂದರೆ ನಾವು ಸಾಯುವ ತನಕ , ನಾವು ಬದುಕಿರುವುದರಿಂದ ಉಸಿರಾಡುತ್ತೇವೆಯೇ ವಿನಹ ( ಜೀವನಂ ಸರ್ವಭೂತೇಷು (ಭ.ಗೀತೆ) ಬದುಕಿರುವ ಶಕ್ತಿಯೇ ಆತ್ಮ) ಆಕ್ಸಿಜನ್‌ನ ಅವಶ್ಯಕತೆ ಮತ್ತು ಉಚ್ಛ್ವಾಸದ ಕಾರಣದಿಂದ ಅಂಗಾರಾಮ್ಲದ ಹೊರಬಿಡುವ ಕಾರ್ಯ ಅಥವಾ ನಿಶ್ವಾಸ ಉಂಟಾಗುವುದಲ್ಲ. ಸಾಮಾನ್ಯವಾಗಿ ಶ್ವಾಸಕೋಶವು ಸಂಕುಚಿತಗೊಂಡು ಅಂಗಾರಾಮ್ಲವು ಹೊರ ಹೋದಾಗ ಒಳಗಿನ ಒತ್ತಡ ಕಡಿಮೆಯಾಗುವುದರಿಂದ ಹೊರಗಿನ ಗಾಳಿ ಶ್ವಾಸಕೋಶವನ್ನು ತುಂಬುತ್ತದೆ. ಈ ಪ್ರಕ್ರಿಯೆ ಸದಾಕಾಲ ಆಗುತ್ತಿರುವುದರಿಂದ ನಾವು ಬದುಕಿರುತ್ತೇವೆ ಎಂದು ನಾವು ನಂಬುತ್ತೇವೆ. ಉಸಿರಾಟವು ಯಾವ ಕಾರಣದಿಂದ ಆಗಿದ್ದರೂ ನಾವು ಬದುಕಿರುವುದರಿಂದಲೇ ಉಸಿರಾಟ ನಡೆಯುತ್ತದೆ ಎನ್ನುವುದು ಸ್ಪಷ್ಟವಾಗಿದೆ. ವೇದಾಂತಿಗಳು ಆತ್ಮನು ದೇಹವನ್ನು ಬಿಟ್ಟು ಹೊರಹೋದಾಗ ಪ್ರಾಣವು ಅವನನ್ನು ಅನುಸರಿಸಿ ಹೋಗುತದೆ. ಆದುದರಿಂದ ದೇಹಕ್ಕೆ ಮರಣ ಉಂಟಾಗುತ್ತದೆ ಎಂದು ನಂಬುತ್ತಾರೆ. ಆದರೆ ಆತ್ಮನು ದೇಹವನ್ನು ಬಿಟ್ಟು ಹೋಗುತ್ತಾನೆ ಮತ್ತು ಆ ಬಳಿಕ ಪ್ರಾಣವು ದೇಹದಲ್ಲಿ ನಿಲ್ಲಲು ಸಾಧ್ಯವಾಗದೆ ಆತನನ್ನು ಅನುಸರಿಸಿ ಹೊರಹೋಗುತ್ತದೆ. ಆಗ ಉಸಿರಾಟ ನಿಲ್ಲುವುದರಿಂದ ಮರಣ ಉಂಟಾಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಇಲ್ಲಿ ಹೇಳುವ ಆತ್ಮವೇ ಆ ಏಸೋಸಿಯೇಷನಿನ ಅರಿವು ಎಂದೇ ತಿಳಿಯಬೇಕಾಗುತ್ತದೆ.

Krishna Rao
Ph :2552560
Mob. :92422 02118

KISHAN
Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ
